# ಕಿತ್ತೂರು ತಾಲೂಕಿನ ಐತಿಹಾಸಿಕ ಸ್ಮಾರಕಗಳು

**ರಾಮಕೃಷ್ಣ ಇಲಕಲ್ಲ**
ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಿತ್ತೂರು.

DOI: https://doi.org/10.5281/zenodo.17296699

## ABSTRACT:

'ಓಲ್ಡ್ ಈಸ್ ಗೋಲ್ಡ್' ಎಂಬ ನಾಣ್ಣುಡಿಯಂತೆ, ಹಳೆಯದೆಲ್ಲಾ ಉತ್ತಮವಾಗಿರುತ್ತದೆ. ಪ್ರಾಚೀನ ಸಂಸ್ಕೃತಿಯ ನೆಲೆಗಳು, ಸಮಾಧಿಗಳು, ದೇವಾಲಯಗಳು, ಸ್ಥಂಭಗಳು, ವಿಗ್ರಹಗಳು, ಶಿಲ್ಪಕಲೆಗಳು, ಶತಮಾನಗಳ ಹಿಂದಿನ ವಸ್ತುಗಳು ಹಾಗೂ ಪಾರಂಪರಿಕ ಕಟ್ಟಡಗಳು, ಅರಮನೆ, ಬಸದಿ, ಕೋಟೆ, ಸಮಾಧಿಗಳು, ಇತ್ಯಾದಿ. ಇವೆಲ್ಲವೂ ಪ್ರಾಚೀನ ಪರಂಪರೆಯ ಕಲೆ, ಜ್ಞಾನ, ವಿಜ್ಞಾನ, ವಾಸ್ತು ವಿದ್ಯೆ, ಸಂಸ್ಕೃತಿ, ಸಂಪ್ರದಾಯ, ನಂಬಿಕೆಗೆ ಪ್ರಬಲ ಸಾಕ್ಷಿಗಳು ಆಗಿವೆ. ಎಲೆ ಮರೆ ಕಾಯಿಯಂತೆ ಉಳಿದ ಇತಿಹಾಸ ಹೇಳುವ ಸ್ಮಾರಕಗಳು ನಮ್ಮ ರಾಜ್ಯದ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನಲ್ಲಿ ಕಂಡುಬರುತ್ತವೆ. ಈ ಐತಿಹಾಸಿಕ ಪ್ರದೇಶದಲ್ಲಿ ಹಲವಾರು ಐತಿಹಾಸಿಕ ಪ್ರಮುಖ ಸ್ಮಾರಕಗಳು ಕಿತ್ತೂರು ತಾಲೂಕಿನ ಹಲವಾರು ಗ್ರಾಮಗಳಲ್ಲಿ ಕಂಡುಬಂದಿವೆ. ಅಂತಃ ಐತಿಹಾಸಿಕ ಪ್ರಮುಖ ಸ್ಮಾರಕಗಳ ಪರಿಚಯವನ್ನು ಈ ಲೇಖನದ ಮೂಲಕ ಮಂಡಿಸಿರುವೆ. ಇದಕ್ಕಾಗಿ ಸ್ಥಳೀಯ ಅಧ್ಯಯನ ಮತ್ತು ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕಿತ್ತೂರು ಇವರ ಸಹಕಾರದ ಮೂಲಕ ಅಧ್ಯಯನ ಮಾಡಿರುವೆ.

## KEYWORDS:

ಕಿತ್ತೂರು, ಕೋಟೆ, ವೀರಗಲ್ಲು, ಶಾಸನ, ದೇಗುಲಹಳ್ಳಿ.

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನಲ್ಲಿ ಕಂಡುಬರುತ್ತವೆ. ಕಿತ್ತೂರು ಪ್ರದೇಶ ಐತಿಹಾಸಿಕವಾಗಿ ಪ್ರಮುಖ ಪ್ರದೇಶವಾಗಿ ಗುರ್ತಿಸಿಕೊಂಡಿದೆ. ಇದಕ್ಕೆ ಸಾಕ್ಷಿಯಾಗಿ ಹಲವಾರು ಅಧ್ಯಯನಗಳು ಈಗಾಗಲೇ ಆಗಿವೆ. ಐತಿಹಾಸಿಕವಾಗಿ ಕಿತ್ತೂರು 15ನೇ ಶತಮಾನದಿಂದ 18ನೇ ಶತಮಾನದವರೆಗೂ ಇಲ್ಲಿ ದೇಸಾಯಿ ಮನೆತನ ಆಳ್ವಿಕೆ ಆರಂಭಿಸಿತು. ಬ್ರಿಟೀಷರ ವಿರುದ್ಧ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವ ಪ್ರಸಿದ್ಧಳು. ಅದಕ್ಕೂ ಪೂರ್ವದಲ್ಲಿ ಇಲ್ಲಿ ಕದಂಬರು, ಚಾಲುಕ್ಯರು ಈ ಪ್ರದೇಶವನ್ನು ಆಳಿದ್ದಾರೆ. ಆದುದರಿಂದ ಈ ಕಿತ್ತೂರು ಪ್ರದೇಶದಲ್ಲಿ ಸಾಕಷ್ಟು ಐತಿಹಾಸಿಕ ಗುರುತುಗಳು ಸಿಗುತ್ತವೆ.

**ವಿಷಯ ನಿರೂಪಣೆ:**

ಇತಿಹಾಸದ ಅಧ್ಯಯನದಲ್ಲಿ ಚಿಕ್ಕದು ಮತ್ತು ದೊಡ್ಡದು ಎಂಬುದು ಇಲ್ಲ. ಹಾಗೆ ಸಾಧನೆ ಇರಲಿ ಇಲ್ಲದಿರಲಿ ಐತಿಹಾಸಿಕ ಅಧ್ಯಯನ ನಮ್ಮೆಲ್ಲರ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಈ ಅಧ್ಯಯನ ಐತಿಹಾಸಿಕ ಸ್ಮಾರಕಗಳಿಗೆ ಸಂಬಂಧಿಸಿದಂತೆ ಕಿತ್ತೂರು ತಾಲೂಕಿನ ಪ್ರದೇಶದ 11 ಗ್ರಾಮಗಳಲ್ಲಿ 70ಕ್ಕೂ ಹೆಚ್ಚು ಐತಿಹಾಸಿಕ ಪ್ರಮುಖ ಗುರುತುಗಳು ಈ ಲೇಖನದಲ್ಲಿವೆ. ಆ ಪ್ರಮುಖ ಸ್ಮಾರಕಗಳು ಈ ಕೆಳಗಿನಂತಿವೆ:

**1. ಕಿತ್ತೂರು ಊರಿನಲ್ಲಿರುವ ಪ್ರಮುಖ ಸ್ಮಾರಕಗಳು**

- ಕಿತ್ತೂರು ಕೋಟೆ: ಶಾ. ಶ. 1650–1681ರ ನಡುವೆ ದೇಸಾಯಿ ರಾಜವಂಶಸ್ಥ 5ನೇ ಅರಸ ಅಲ್ಲಪ್ಪಗೌಡ ಸರ್ದೇಸಾಯಿ ಈ ಕೋಟೆಯನ್ನು ನಿರ್ಮಿಸಿದರು. ಕಪ್ಪು ಕಲ್ಲನ್ನು

ಬಳಸಿದ್ದಾರೆ. ಅಂದಾಜು 23 ಎಕರೆ ವಿಸ್ತೀರ್ಣ ಹೊಂದಿದೆ. ಕೋಟೆಯ ಸುತ್ತ ಬೃಹತ್ ಗೋಡೆಗಳು ಇವೆ. ಇಲ್ಲಿ ಕಂಡುಬರುವ ಪ್ರಮುಖ ಸ್ಮಾರಕಗಳು: ಕಿತ್ತೂರು ಅರಮನೆ ಮತ್ತು ಸಂಬಂಧಿಸಿದ ಪ್ರಮುಖ ಕೋಣೆಗಳು, ವೀಕ್ಷಣಾ ಗೋಪುರ, ಮತ್ತು 1967 ರಿಂದ ಇಲ್ಲಿನ ಐತಿಹಾಸಿಕ ವಸ್ತುಗಳನ್ನು ಕಾಪಾಡಲು ಪುರಾತತ್ವ ಮ್ಯೂಸಿಯಂ ಇದೆ.

- ಸಂಸ್ಥಾನ ಕಲ್ಮಠ: ರಾಜಗುರುಗಳ ಸಂಸ್ಥಾನ ಕಲ್ಮಠ. ಮಠವು ಉತ್ತರಾಭಿಮುಖವಾಗಿದ್ದು, ಭವ್ಯವಾದ ತೆರೆದ ಪ್ರವೇಶದ್ವಾರ, ಪಡಸಾಲೆ, ಅನುಷ್ಠಾನ ಕೋಣೆಗಳು ಕಂಡುಬರುತ್ತವೆ. ಪಡಸಾಲೆಯ ಛತ್ತಿನಲ್ಲಿ 9 ಅಂಕಣಗಳಿವೆ. ತಲಾ ಒಂದರ ನಡುವೆ ಕಮಲದ ಅಲಂಕಾರಗಳಿವೆ. ಸು. 16ನೇ ಶತಮಾನದಿಂದ ಬೆಳೆದು ಬಂದಿದೆ. ಕಪ್ಪು ಕಲ್ಲಿನಿಂದ ಕೂಡಿರುವ ಇತಿಹಾಸದ ಸ್ಮಾರಕವಾಗಿದೆ.
- ವೀರಗಲ್ಲು ಶಾಸನ: 13–14ನೇ ಶತಮಾನ ಕಾಲದ ಈ ವೀರಗಲ್ಲು ಹೆಬ್ಬಳ್ಳಿಯವರ ಬಾವಿಗೆ ಹೊಂದಿಕೊಂಡಿದೆ. ವೀರಗಲ್ಲು ನಾಲ್ಕು ಪಟ್ಟಿಕೆಗಳನ್ನು ಒಳಗೊಂಡಿದೆ. ಈ ವೀರಗಲ್ಲಿನ ಪಟ್ಟಿಕೆಯ ಮೇಲ್ಭಾಗದಲ್ಲಿ ಕನ್ನಡ ಲಿಪಿಯ ಶಾಸನ ಕಂಡುಬರುತ್ತದೆ.
- ಹಜರತ ಮುರ್ತುಜಾ ಶಾ ವಲಿ ಕಾದ್ರಿ ದರ್ಗಾ: 18ನೇ ಶತಮಾನದ ಹಜರತ ಮುರ್ತುಜಾ ಶಾ ವಲಿ ಕಾದ್ರಿ ಅವರ ಸ್ಮಾರಕ. ಗಾರೆ, ಕಲ್ಲು, ಮಣ್ಣಿನಿಂದ ನಿರ್ಮಾಣಗೊಂಡಿದೆ.
- ಇತರೆ ಪ್ರಮುಖ ಕಟ್ಟಡಗಳು: ಆಂಜನೇಯ ದೇವಸ್ಥಾನ, ಬಸವೇಶ್ವರ ದೇವಸ್ಥಾನ, ಚೌಕಿಮಠ, ಮಹಾಬಳೇಶ್ವರ ದೇವಸ್ಥಾನ, ಮುದಿಮಲ್ಲಪ್ಪಾ ದೇಸಾಯಿಯವರ ಸ್ಮಾರಕ, ಶಿವಲಿಂಗ ರುದ್ರಸರ್ಜಾ ಸಂಸ್ಥಾನ ಕಲ್ಮಠ, ರಂಜನಿ ಮಹಲ್ ಸಂಸ್ಥಾನ ಕಲ್ಮಠ, ವೀರಪ್ಪಾದೇಸಾಯಿ ಸ್ಮಾರಕ, ಬಾಳಾಸಾಹೇಬ ಸಂಸ್ಥಾನ ಕಲ್ಮಠ, ಪ್ರಭುದೇವರ ಗದ್ದುಗೆ, ಗುರುಸಿದ್ದೇಶ್ವರ ದೇವಸ್ಥಾನ, ಕಲ್ಲೂರು ಮಲ್ಲಪ್ಪ ಸಮಾಧಿ ಸಂಸ್ಥಾನ ಕಲ್ಮಠ ಇತ್ಯಾದಿ.

**2. ಅವರಾದಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ಶ್ರೀ ರಾಮಲಿಂಗೇಶ್ವರ ದೇವಾಲಯ: ಶಾ. ಶ. 11–12ನೇ ಶತಮಾನದಲ್ಲಿ ನಿರ್ಮಾಣವಾದ ರಾಮಲಿಂಗೇಶ್ವರ ದೇವಾಲಯವು ಗೋವಾ ಕದಂಬರ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ. ಇದು ದ್ರಾವಿಡ ಶೈಲಿಯ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿದ್ದು, ಪೂರ್ವ ಹಾಗೂ ದಕ್ಷಿಣಕ್ಕೆ ದ್ವಾರಗಳಿವೆ. ಸ್ಥಳ ವಿನ್ಯಾಸದ ಆಧಾರದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಒಳಗೊಂಡಿದೆ. ಅಧಿಷ್ಠಾನವು ನಕ್ಷತ್ರಾಕಾರದ ರಚನೆಯನ್ನು ಹೊಂದಿದೆ. ಗರ್ಭಗೃಹಕ್ಕೆ ದ್ರಾವಿಡ ಶೈಲಿಯ ಶಿಖರವನ್ನು ಒಳಗೊಂಡಿದೆ. ಅಂತರಾಳದ ಕಂಬಗಳಲ್ಲಿ ಸರಸ್ವತಿ ಹಾಗೂ ಮಹೇಶ್ವರಿಯ ಮೂರ್ತಿಗಳಿವೆ. ಮುಖಮಂಟಪದ ಎದುರಿಗೆ ನಂದಿ, ಉತ್ತರ ಭಾಗದಲ್ಲಿ ಸಣ್ಣ ಗರ್ಭಗೃಹವಿದ್ದು, ಅದರಲ್ಲಿ ತುಟಿತಗೊಂಡಿರುವ ಸೂರ್ಯನ ಮೂರ್ತಿ ಕಂಡುಬರುತ್ತದೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲಿ ಅರ್ಧಕಂಬಗಳಿದ್ದು, ಮಧ್ಯದಲ್ಲಿ ಶಿವಲಿಂಗವಿದೆ.
    - » ಈ ದೇವಾಲಯದಲ್ಲಿರುವ ಇತರ ಪ್ರಮುಖ ಸ್ಮಾರಕಗಳು ಈ ಕೆಳಗಿನಂತಿವೆ:
    - » ಸಪ್ತಮಾತೃಕೆಯರು, ನಾಗ–ನಾಗಿಣಿ, ಮಹೇಶ್ವರಿ, ವೀರಭದ್ರ, ದಕ್ಷ ಮೂರ್ತಿಗಳು ಇವೆ.
- ಕಾಲಭೈರವ: 12ನೇ ಶತಮಾನದ ಅವರಾದಿ ಗ್ರಾಮದಲ್ಲಿರುವ ಈ ಮೂರ್ತಿ ಶಿಲ್ಪ ಕಾಲಭೈರವನದ್ದಾಗಿದೆ.

### 3. ದೇಗುಲಹಳ್ಳಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು

- ಈಶ್ವರ ದೇವಾಲಯ: 12ನೇ ಶತಮಾನದ ಗೋವಾ ಕದಂಬರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯವು ವಾಸ್ತು ವಿನ್ಯಾಸ, ಗರ್ಭಗೃಹ, ಅಂತರಾಳ, ವಿಶಾಲವಾದ ತೆರೆದ ಸಭಾ ಮಂಟಪ ಹೊಂದಿದೆ. ಗರ್ಭಗೃಹದ ಮಧ್ಯದಲ್ಲಿ ಗೋವೆ ಕದಂಬರ ಕಾಲಕ್ಕೆ ಸೇರಿದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಅಲಂಕೃತ ನಾಲ್ಕು ಅರ್ಧ ಕಂಬಗಳನ್ನು ಕಾಣಬಹುದು. ಭುವನೇಶ್ವರಿಯಲ್ಲಿ ನಕ್ಷತ್ರಾಕಾರದ ಕಮಲವನ್ನು ಕಾಣುತ್ತೇವೆ. ಸ್ತಂಭಗಳು: ಪೀಠಭಾಗ, ಕಾರಕ ಭಾಗ, ಬೋದಿಗೆ ಫಲಕಗಳನ್ನು ಒಳಗೊಂಡಿದೆ. ಸಭಾ ಮಂಟಪದಲ್ಲಿ ಒಂದು ಸು. 18–19ನೇ ಶತಮಾನಕ್ಕೆ ಸೇರಿದ ಒಂದು ಶಾಸನ ಕಂಡುಬರುತ್ತದೆ. ಈ ಶಾಸನ ಕನ್ನಡ ಭಾಷೆಯಲ್ಲಿದೆ.
    - » ಈ ದೇವಾಲಯದ ಪ್ರಮುಖ ಮೂರ್ತಿಗಳು:
    - » 11–12ನೇ ಶತಮಾನದ ಗಜಲಕ್ಷ್ಮೀ.
    - » ನಂದಿ: 12ನೇ ಶತಮಾನದ ನಂದಿ ಪೀಠ ಪೂರ್ವ ಪಶ್ಚಿಮವಾಗಿ 170 ಸೆಂ.ಮೀ., ನಂದಿ ವಿಗ್ರಹ 140 ಸೆಂ.ಮೀ. ಎತ್ತರ, 120 ಸೆಂ.ಮೀ. ಅಗಲ, ದಕ್ಷಿಣೋತ್ತರವಾಗಿ 80 ಸೆಂ.ಮೀ. ದೇವಾಲಯದ ಮುಂಭಾಗದ ಮಂಟಪದಲ್ಲಿದ್ದು, ಗಣೇಶ ಮೂರ್ತಿ, ನಾಗ ನಾಗಿಣಿ. ಈ ಮೂರ್ತಿ ಶಿಲ್ಪ ನಾಗನಾಗಿಣಿಯರದ್ದಾಗಿದ್ದು. ಪೂರ್ವದಲ್ಲಿ 70 ಸೆಂ.ಮೀ. ಉದ್ದ, ದಕ್ಷಿಣೋತ್ತರವಾಗಿ 40 ಸೆಂ.ಮೀ. ಅಗಲವಾಗಿದೆ. ನಾಗ–ನಾಗಿಣಿ ಶಿಲ್ಪ ಸರ್ಪವು ದಕ್ಷಿಣಕ್ಕೆ ಮುಖ ಮಾಡಿದೆ.
    - » ಈಶ್ವರ ಲಿಂಗ: ಈ ಮೂರ್ತಿ ಶಿಲ್ಪ ಶಿವಲಿಂಗವಾಗಿದ್ದು. ಇದರ ಮುಂದೆ ನಂದಿ ಕುಳಿತಿದ್ದು ಮತ್ತು ಎಡಭಾಗದಲ್ಲಿ ನಾಗ ಶಿಲ್ಪವಿದೆ.
    - » 12ನೇ ಶತಮಾನದ ವೀರಗಲ್ಲು ಇದೆ.
    - » ಇಲ್ಲಿಯೇ ನಾಗ ಮೂರ್ತಿ 12ನೇ ಶತಮಾನದ್ದು, ಮೂರು ಹೆಡೆಯನ್ನು ಬಿಚ್ಚಿಕೊಂಡಿದೆ. ಇದರ ಬಲಭಾಗದಲ್ಲಿ ಸಪ್ತಮಾತೃಕೆಯರ ಮೂರ್ತಿ ಕಂಡುಬರುತ್ತದೆ.

### 4. ದೇವರ ಶೀಗಿಹಳ್ಳಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು

- ಶಾಸನ (ಸೂರ್ಯದೇವಾಲಯದ ಕಂಬದ ಶಾಸನ): ಸೂರ್ಯದೇವಾಲಯದ ಮುಂಭಾಗದಲ್ಲಿರುವ ಶಾಸನವು ಉತ್ತರಾಭಿಮುಖವಾಗಿದ್ದು. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿದೆ. ಶಾಸನವು 28 ಸಾಲುಗಳನ್ನು ಒಳಗೊಂಡಿದೆ. ಮೇಲಿನ ಪಟ್ಟಿಕೆಯಲ್ಲಿ ಆಕಳು ಕರುವಿಗೆ ಹಾಲು ಉಣಿಸುವುದು, ಬಲಭಾಗದಲ್ಲಿ ಯೋಗಿ ಕೈ ಮುಗಿದು ಧ್ಯಾನಿಸುತ್ತಿರುವನು. ಮಧ್ಯದಲ್ಲಿ ಈಶ್ವರ (ಶಿವಲಿಂಗವಿದೆ). ಯೋಗಿಯ ಬಲಭಾಗದಲ್ಲಿ ಖಡ್ಗವಿದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರಿದ್ದಾರೆ.
- ಸೂರ್ಯ ದೇವಾಲಯ: ಸೂರ್ಯ ದೇವಾಲಯವು ಉತ್ತರಾಭಿಮುಖವಾಗಿದ್ದು. ಕಲ್ಯಾಣಿ ಚಾಲುಕ್ಯರ ಸು. ಶ. ಸು. 16 ದೇವಾಲಯ ಇರುತ್ತದೆ. 3 ಗರ್ಭಗೃಹವನ್ನು ಹೊಂದಿದ್ದು, ಶಿವಲಿಂಗವು ಸ್ಫಟಿಕವಾಗಿದ್ದು ಮುಂದೆ ನಂದಿ ಎಡಗಾಲನ್ನು ಚಾಚಿದೆ.
- ವೀರಗಲ್ಲು: 12ನೇ ಶತಮಾನದ ಈ ವೀರಗಲ್ಲು ಜುಂಜೇಶ್ವರ ದೇವಾಲಯದ ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮಹಾಸತಿಗಲ್ಲು ಕೂಡಾ ಇದೆ.
- ಶಾಸನಗಲ್ಲು (ಈಶ್ವರದೇವಾಲಯದ ಎಡಭಾಗದ ಕಂಬದಲ್ಲಿರುವ): 12ನೇ ಶತಮಾನದ ಶಾಸನ ಕಲ್ಲು ಈಶ್ವರ ದೇವಾಲಯದ ಎಡಭಾಗದ ಸಭಾಗೃಹದಲ್ಲಿದೆ. 16 ಸಾಲುಗಳನ್ನು ಒಳಗೊಂಡಿದೆ.

**5. ದೇವಗಾಂವ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ವೀರಗಲ್ಲು: ಇದು ತುರುಗೋಳ್ ವೀರಗಲ್ಲಾಗಿದ್ದು, ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಕೆಳಭಾಗದ ಪಟ್ಟಿಕೆಯಲ್ಲಿ ಗೋವುಗಳ ರಕ್ಷಣೆಗಾಗಿ ವೀರನು ಕೈಯಲ್ಲಿ ಬಿಲ್ಲು ಬಾಣ ಹಿಡಿದು ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ನಂತರದ ಪಟ್ಟಿಕೆಯಲ್ಲಿ ಶಿವಲಿಂಗ, ನಂದಿ. ಮೇಲ್ಭಾಗದಲ್ಲಿ ದ್ರಾವಿಡ ಮಾದರಿಯ ಶಿಖರ ಅಲಂಕಾರಗೊಂಡಿದೆ ಮತ್ತು ಶಾಸನ ಲಿಪಿ ಕಂಡುಬರುತ್ತದೆ.
- ಮಹಾಸತಿಗಲ್ಲು: 14ನೇ ಶತಮಾನದ ದೇವಗಾಂವ ಗ್ರಾಮದ ಕಲ್ಮೇಶ್ವರ ದೇವಾಲಯದ ಎಡಭಾಗದಲ್ಲಿದೆ.
- ಶಿವಲಿಂಗ: 18ನೇ ಶತಮಾನದ ಈಶ್ವರ ದೇವಾಲಯದಲ್ಲಿದೆ. ಈ ಶಿವಲಿಂಗವು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿರುವ ಈಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ. ಲಿಂಗದ ಎತ್ತರ 35 ಸೆಂ.ಮೀ. ತಳಭಾಗವಿದೆ. ಹಸಿರು ಬಳಪದ ಕಲ್ಲಿನಿಂದ ಕೆತ್ತಲಾಗಿರುವ ದೃಶ್ಯ ಕಂಡುಬರುತ್ತದೆ.
- ಇಲ್ಲಿರುವ ಪ್ರಾಚೀನ ಮೂರ್ತಿಗಳು: ನಂದಿ, ಪಾರ್ಶ್ವನಾಥ, ಭೈರವಿ, ನಾಗ ಮತ್ತು ನಾಗಿಣಿ ಮೂರ್ತಿಗಳು, ಪದ್ಮನಿಧಿ (ಶಂಖನಿಧಿ), ಸಪ್ತಮಾತೃಕೆಯರು 12ನೇ ಶತಮಾನ ಕಾಲಕ್ಕೆ ಸೇರಿವೆ.

**6. ಹೊನ್ನಿದಿಬ್ಬ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ಈಶ್ವರ ದೇವಾಲಯ: 10–11ನೇ ಶತಮಾನದ ಈಶ್ವರ ದೇವಾಲಯವಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು. ಗರ್ಭಗೃಹವು ಚೌಕಾಕಾರವಾಗಿದ್ದು. ನಾಲ್ಕು ಮೂಲೆಗಳಲ್ಲಿ ನಾಲ್ಕು ಕಂಬಗಳಿವೆ. ಶಿವಲಿಂಗದ ಜಲಧಾರೆಯು ಉತ್ತರಾಭಿಮುಖವಾಗಿದ್ದು. ಅಂತರಾಳದ ಕಂಬಗಳು ಗೋಡೆಯ ಎರಡೂ ಕಡೆ ಯಾವುದೇ ಅಲಂಕಾರ ಹೊಂದಿರುವುದಿಲ್ಲ. ನಂತರ ನವರಂಗದಲ್ಲಿ 16 ಕಂಬಗಳು ಕಂಡುಬರುತ್ತವೆ.
- ಪ್ರಾಚೀನ ಮೂರ್ತಿಗಳು: ಸಪ್ತಮಾತೃಕೆಯರು ಮತ್ತು 14–15ನೇ ಶತಮಾನದ ನಂದಿ ವಿಗ್ರಹ ಇದೆ.

**7. ಕಾದರವಳ್ಳಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ವೀರಗಲ್ಲು (ತುರುಗೋಳ್): 14ನೇ ಶತಮಾನದ ಇದು ವೀರಭದ್ರೇಶ್ವರ ದೇವಾಲಯದ ಬಲಭಾಗದಲ್ಲಿದೆ. ಈ ವೀರಗಲ್ಲು ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಕೆಳಗಿನ ಪಟ್ಟಿಕೆಯಲ್ಲಿ ವೀರನು ವೈರಿಯೊಂದಿಗೆ ಹೋರಾಡುತ್ತಿದ್ದಾನೆ. ವೀರರು ಕೈಯಲ್ಲಿ ಬಿಲ್ಲು, ಬಾಣ, ಈಟಿ ಮತ್ತು ಖಡ್ಗ ಆಯುಧಗಳನ್ನು ಹಿಡಿದಿದ್ದಾರೆ. ಐದು ಆಕಳುಗಳು ಕಂಡುಬಂದಿವೆ. ಮೇಲಿನ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಮೂರನೇ ಪಟ್ಟಿಕೆಯಲ್ಲಿ ಯತಿಯು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಎಡಬದಿಯಲ್ಲಿ ವೀರನು ಪದ್ಮಾಸನದಲ್ಲಿ ಕುಳಿತಿದ್ದು, ಅವನ ಪಕ್ಕದಲ್ಲಿ ಒಬ್ಬ ಮಹಿಳೆ ಶಿವಲಿಂಗಕ್ಕೆ ನಮಿಸುತ್ತಿದ್ದಾಳೆ. ಎರಡು ಬದಿಯಲ್ಲಿ ಸೂರ್ಯ, ಚಂದ್ರ, ಮತ್ತು ಹಸುವಿದೆ. ಮಧ್ಯದ ಎರಡು ಪಟ್ಟಿಕೆಯ ಅಡ್ಡ ಪಟ್ಟಿಯಲ್ಲಿ ಶಾಸನವಿದೆ.
  - » ಇಲ್ಲಿಯೇ 12–13ನೇ ಶತಮಾನದ ಉಮಾಮಹೇಶ್ವರಿ, ಗಣೇಶ ಮೂರ್ತಿ, ಮತ್ತು ಮಹಾಸತಿಕಲ್ಲು ಹಾಗೂ ಶಿವಲಿಂಗ ಮೂರ್ತಿ. 14–15ನೇ ಶತಮಾನದ ಈ ಮೂರ್ತಿ ಶಿಲ್ಪ ಶಿವಲಿಂಗವಾಗಿದ್ದು,

ಶಿವಲಿಂಗವು ಹಸಿರು ಬಳಪದ ಕಲ್ಲನ್ನು ಬಳಸಿ ನಿರ್ಮಿಸಲಾಗಿದೆ. ಇದರ ತಳಭಾಗ 59 ಸೆಂ.ಮೀ., ಪೀಠಭಾಗ 39 ಸೆಂ.ಮೀ. ಇದೆ. ಪೀಠಭಾಗ ಎತ್ತರವಾದ ಜಗಲಿಯ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿಯೇ 14ನೇ ಶತಮಾನದ ಮಹಾಸತಿಗಲ್ಲು, ವೀರಗಲ್ಲು ಇವೆ.

- ಶಾಸನ: 12ನೇ ಶತಮಾನದ ಕಾದರವಳ್ಳಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯದ ಆಲದ ಮರದ ಕೆಳಗಿದೆ. ಈ ತುಟಿತ ಶಾಸನವು ಕೆಳಹಂತದಲ್ಲಿ ಕನ್ನಡ ಭಾಷೆಯ ಶಾಸನ ಲಿಪಿ ಇರುವುದು ತುಟಿತಗೊಂಡಿದೆ. ನಡುವೆ ಈಶ್ವರ, ಎಡಭಾಗದಲ್ಲಿ ನಂದಿ, ಬಲಭಾಗದಲ್ಲಿ ಪೂಜಿಸುತ್ತಿರುವ ಯತಿ, ಮೇಲೆ ಸೂರ್ಯ-ಚಂದ್ರರಿದ್ದಾರೆ.
- ಷಣ್ಮುಖ ಮೂರ್ತಿ: ಕಾದರವಳ್ಳಿ ಗ್ರಾಮದ ಸದ್ಗುರು ಅದೃಶ್ಯಾನಂದ ಸ್ವಾಮಿ ಮಠ ದೇವಸ್ಥಾನದ ಬಲಭಾಗದಲ್ಲಿದೆ.
- ಸೂರ್ಯ ಮೂರ್ತಿ: 12–13ನೇ ಶತಮಾನದ ಗ್ರಾಮದ ಬಸವೇಶ್ವರ ದೇವಸ್ಥಾನದ ಮುಂದಿನ ಆವರಣದಲ್ಲಿದೆ.
- ಮಹಾಸತಿಕಲ್ಲು: 13–14ನೇ ಶತಮಾನದ ಶ್ರೀ ಗುರುಪಾದಯ್ಯ ಸ. ಹಿರೇಮಠ ಇವರ ಮನೆಯ ಹಿಂಭಾಗದಲ್ಲಿದೆ.
- ನಂದಿ: ಶ್ರೀ ಬಸಪ್ಪ ಚ. ಗಣಾಚಾರಿ ಅವರ ಮನೆಯಲ್ಲಿದೆ. ಈ ಶಿವಲಿಂಗದ ಮುಂದೆ ಎರಡು ನಂದಿ ಮೂರ್ತಿಗಳಿವೆ.
- ಶಿವಲಿಂಗ: ಕಾದರವಳ್ಳಿ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದಲ್ಲಿದ್ದು, ಈ ಶಿವಲಿಂಗವು ತ್ರಿಪೀಠದ ಎತ್ತರದ ಜಗಲಿಯ ಮೇಲೆ ಪ್ರತಿಷ್ಠಾಪಿಸಲಾಗಿದೆ. ಇದು ಗ್ರೀನ್ ಬಳಪದ ಕಲ್ಲಿನಿಂದ ನಿರ್ಮಾಣವಾಗಿದೆ. ಲಿಂಗದ ಪೀಠಭಾಗ 47 ಉದ್ದ ಮತ್ತು ಸುತ್ತಳತೆ 150 ಸೆಂ.ಮೀ. ಇದೆ. ಈಶ್ವರ ಲಿಂಗದ ಎದುರಿಗೆ ನಂದಿ ಮೂರ್ತಿ ಇದೆ. ಕಾದರವಳ್ಳಿ ಗ್ರಾಮದ ಹೊಳೆಯ ದಡದಲ್ಲಿದೆ. ಶಿವಲಿಂಗಕ್ಕೆ ಕಪ್ಪು ಬಣ್ಣವನ್ನು ಹಚ್ಚಿದ್ದಾರೆ. ಇಲ್ಲಿಯೇ 13–14ನೇ ಶತಮಾನದ ಮಹಿಷಾಸುರ ಮರ್ದಿನಿ, ಮಹಾಸತಿಗಲ್ಲು ಇವೆ.
- ವೀರಗಲ್ಲು: 12–13ನೇ ಶತಮಾನದ ಈ ವೀರಗಲ್ಲು ಕಾದರವಳ್ಳಿ ಗ್ರಾಮದ ಪ್ಯಾಟಿ ಓಣಿಯಲ್ಲಿದೆ.

**8. ಕಲಭಾಂವಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ಶಾಸನ: 12ನೇ ಶತಮಾನಕ್ಕೆ ಸೇರಿದೆ. ಇದು ಕಲಭಾಂವಿ ಗ್ರಾಮದ ದಿಗಂಬರ ಜೈನ ಧಾಮದ ಎದುರಿಗೆ. ಶಾಸನ ಕನ್ನಡ ಭಾಷೆ ಹಾಗೂ ಲಿಪಿಯ ಅಕ್ಷರಗಳ 20 ಸಾಲುಗಳು ಮಾತ್ರ ಕಂಡುಬಂದಿದ್ದು, ಮೇಲಿನ ಅಕ್ಷರಗಳು ತುಟಿತಗೊಂಡಿವೆ. ಇದು ದಿಗಂಬರ ಜೈನ ಧಾಮದ ಎದುರಿನ ಮುನಿ ನಿವಾಸದ ಗೋಡೆಯ ಮುಂಭಾಗದಲ್ಲಿದೆ.
- ಆದಿನಾಥ: ಈ ಮೂರ್ತಿ ಬಸದಿಯ ಗರ್ಭಗೃಹದಲ್ಲಿ ಆದಿನಾಥನ ಮೂರ್ತಿ ಶಿಲ್ಪ ಬಹು ಸುಂದರವಾಗಿದೆ.
- ವೀರಗಲ್ಲು: 11ನೇ ಶತಮಾನದ ಮತ್ತು 14ನೇ ಶತಮಾನದ ವೀರಗಲ್ಲು ಇದೆ.
- ದಕ್ಷ: 12–13ನೇ ಶತಮಾನದ್ದು, ಮಾರುತಿ ದೇವಸ್ಥಾನದ ಮುಂಭಾಗದಲ್ಲಿದೆ. ವಿಷ್ಣು ಮೂರ್ತಿ ಕೂಡಾ ಇದೆ.
- ಸೂರ್ಯ: 13–14ನೇ ಶತಮಾನದ ಈ ಸೂರ್ಯನ ಮೂರ್ತಿ ಇದೆ.

- ಉಮಾ ಮಹೇಶ್ವರಿ: 12–13ನೇ ಶತಮಾನದ ಮತ್ತು ನಂದಿ: 14–15ನೇ ಶತಮಾನದ ಕಲಭಾಂವಿ ಗ್ರಾಮದ ಕಲ್ಮೇಶ್ವರ ದೇವಾಲಯದಲ್ಲಿದೆ.
- ಈಶ್ವರ: 18–19ನೇ ಶತಮಾನದ ಈ ಮೂರ್ತಿ ರಾಮಲಿಂಗೇಶ್ವರ ದೇವಸ್ಥಾನದ ಮುಂಭಾಗದಲ್ಲಿದೆ.

**9. ಮೇಟ್ಯಾಲ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ವೀರಗಲ್ಲು ಇತರೆ ಮೂರ್ತಿಗಳು: 14ನೇ ಶತಮಾನದ 2 ವೀರಗಲ್ಲುಗಳು ಮೇಟ್ಯಾಲ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದ ಮುಂಭಾಗದಲ್ಲಿದೆ. ಮತ್ತು ಇನ್ನೊಂದು ವೀರಗಲ್ಲು ಮಡ್ಡಿ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿದೆ. ಮತ್ತು ಈ ಗ್ರಾಮದಲ್ಲಿ 14ನೇ ಶತಮಾನದ ಸ್ಕಂದಮೂರ್ತಿ, ಸಪ್ತಮಾತೃಕೆಯರು, ಎರಡು ದುರ್ಗಾ ಮೂರ್ತಿಗಳು, ಪಾಂಡವರ ಮೂರ್ತಿಕಲ್ಲು ಮತ್ತು 15–16ನೇ ನಾಗ ನಾಗಿಣಿ ಶಿಲ್ಪಗಳು, ಸೂರ್ಯ–ಚಂದ್ರರು ಶಿಲ್ಪಗಳು ಕಂಡುಬರುತ್ತವೆ.
- ರಾಮಲಿಂಗೇಶ್ವರ ದೇವಾಲಯ: 18ನೇ ಶತಮಾನದ ರಾಮಲಿಂಗೇಶ್ವರ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದೆ. ಇದು ಕಪ್ಪು ಕಲ್ಲಿನಿಂದ ನಿರ್ಮಾಣವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗ ಕಂಡುಬರುತ್ತದೆ.

**10. ನಾಯಿತೇಗೂರ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ಸಿದ್ದಲಿಂಗೇಶ್ವರ ದೇವಸ್ಥಾನ: 14ನೇ ಶತಮಾನದ ದೇವಸ್ಥಾನವು ಪೂರ್ವಾಭಿಮುಖವಾಗಿದ್ದು. ಇದು ಗರ್ಭಗೃಹ, ಅಂತರಾಳವನ್ನು ಹೊಂದಿದೆ. ಸಭಾಮಂಟಪ ಜಂಬಿಟ್ಟಿಗೆಯಿಂದ ನಿರ್ಮಿಸಲಾಗಿದೆ. ದೇವಾಲಯದ ಹೊರಭಾಗದಲ್ಲಿ 12ನೇ ಶತಮಾನದ ಷಣ್ಮುಖ ಮೂರ್ತಿ, ಗಣೇಶ ಕೂಡಾ ಇವೆ.
- ಶಾಸನಗಲ್ಲು: 12ನೇ ಶತಮಾನದ ಇದು ನಾಯಿತೇಗೂರ ಗ್ರಾಮದ ಮಾರುತಿ ದೇವಸ್ಥಾನದ ಮುಂಭಾಗದಲ್ಲಿ. ಈ ಶಾಸನಗಲ್ಲು ಕೆಳಭಾಗದಲ್ಲಿ ಶಾಸನ ಲಿಪಿ ಹೊಂದಿದೆ. ಆದರೆ ಅದು ತುಟಿತಗೊಂಡಿದೆ. ಮೇಲಿನ ಹಂತದ ಮಂಟಪದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ, ಪಕ್ಕದಲ್ಲಿ ನಂದಿ ಕಂಡುಬರುತ್ತದೆ.

**11. ಚಿಕ್ಕನಂದಿಹಳ್ಳಿ ಗ್ರಾಮದಲ್ಲಿರುವ ಪ್ರಮುಖ ಸ್ಮಾರಕಗಳು**

- ಕಲ್ಮೇಶ್ವರ ದೇವಸ್ಥಾನ: 16ನೇ ಶತಮಾನದ ಕಲ್ಮೇಶ್ವರ ದೇವಸ್ಥಾನವು ಚಿಕ್ಕದಾಗಿದ್ದು, ಒಳಗಡೆ ನಂದಿ, ಶಿವಲಿಂಗ ಮೂರ್ತಿಗಳು ಕಂಡುಬರುತ್ತವೆ. ದೇವಾಲಯದ ಕಂಬಗಳು, ಗೋಡೆಗಳು ಕಂಡುಬರುತ್ತವೆ ಮತ್ತು 12ನೇ ಶತಮಾನದ ವಿಷ್ಣು ಮೂರ್ತಿ ಇದೆ.
- ಗುಳೆ ಬಸವಣ್ಣ: 12ನೇ ಶತಮಾನದ್ದು, ಒಂದೇ ಶಿಲ್ಪದಲ್ಲಿ ಮೂರು ಮೂರ್ತಿಗಳನ್ನು ಹೊಂದಿದೆ. ಒಂದು ಕಡೆ ಜಟಾಧಾರಿ ಈಶ್ವರ, ಪಕ್ಕದಲ್ಲಿ ಮಹೇಶ್ವರಿ ಮತ್ತು ಮೇಲ್ಗಡೆ ನಂದಿಯ ಮೂರ್ತಿ ಕಂಡುಬರುತ್ತದೆ.
- ಕೂಗು ಬಸವ ದೇವಸ್ಥಾನ: 12ನೇ ಶತಮಾನದ್ದು, ಚಿಕ್ಕನಂದಿಹಳ್ಳಿ ಗ್ರಾಮದ ಶ್ರೀ ಕೂಗು ಬಸವನ ಗುಡಿಯ ತಳವಿನ್ಯಾಸ. ಈ ದೇವಸ್ಥಾನ ಕಪ್ಪು ಕಲ್ಲಿನಿಂದ ನಿರ್ಮಾಣವಾಗಿದ್ದು ಮತ್ತು ಗರ್ಭಗೃಹದಲ್ಲಿ ನಂದಿ ಮೂರ್ತಿ ಇದೆ. ಇದು ಅಂತರಾಳ, ಭಿತ್ತಿ, ಸಭಾ ಮಂಟಪವನ್ನು, ಕಂಬಗಳನ್ನು ಹೊಂದಿದ್ದು, ನಾಗ ನಾಗಿಣಿ ಮೂರ್ತಿ ಕಂಡುಬರುತ್ತದೆ.

**ಉಪಸಂಹಾರ:**

ಭಾರತ ಸಂವಿಧಾನವು ತನ್ನ ಮೂಲಭೂತ ಕರ್ತವ್ಯಗಳ ಅಡಿಯಲ್ಲಿ ಪ್ರತಿಯೊಬ್ಬ ಪ್ರಜೆಯು ಭಾರತದ ಸಮ್ಮಿಶ್ರ ಸಂಸ್ಕೃತಿಯ ಮೌಲ್ಯ ಮತ್ತು ಶ್ರೀಮಂತ ಪರಂಪರೆಯನ್ನು ರಕ್ಷಿಸುವುದು ಹಾಗೂ ಇತಿಹಾಸದ ದೇವಾಲಯಗಳು, ಮೂರ್ತಿಗಳು, ಸ್ತಂಭಗಳು, ಶಾಸನಗಳು, ಕೋಟೆಗಳು ಇತ್ಯಾದಿ ಮತ್ತು ಅರಣ್ಯ, ಸರೋವರಗಳು, ನದಿಗಳು ಮತ್ತು ವನ್ಯ ಪ್ರಾಣಿಗಳಿಂದ ಕೂಡಿರುವ ಪ್ರಾಕೃತಿಕ ಪರಿಸರವನ್ನು ರಕ್ಷಿಸಿ, ಪೋಷಿಸುವುದು. ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನಲ್ಲಿರುವ ಹಲವಾರು ಐತಿಹಾಸಿಕ ಪಾರಂಪರಿಕ ತಾಣಗಳು ಕಂಡುಬರುತ್ತವೆ. ಅವುಗಳನ್ನು ರಕ್ಷಿಸುವುದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ ಆಗಿರುತ್ತದೆ. ಈ ನಿಟ್ಟಿನಲ್ಲಿ ಸರಕಾರಿ ಪುರಾತತ್ವ ಇಲಾಖೆಯು ಸಾಕಷ್ಟು ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಗಳಿಗೆ ನಾವು ಕೈ ಜೋಡಿಸೋಣ ಮತ್ತು ನಮ್ಮ ಇತಿಹಾಸ ಕಾಪಾಡಿಕೊಳ್ಳೋಣ.

**ಪರಾಮರ್ಶನ ಗ್ರಂಥಗಳು:**


1. ಪುರಾತತ್ವ ಇಲಾಖೆ ಸರಕಾರಿ ದಾಖಲೆಗಳು, ಕಿತ್ತೂರು ಮ್ಯೂಸಿಯಂ, ಕಿತ್ತೂರು
2. ಬೆಳಗಾವಿ ಜಿಲ್ಲೆಯ ಪುರಾತತ್ವ ವರದಿಗಳು
3. ಕರ್ನಾಟಕ ಸರಕಾರದ ಪುರಾತತ್ವ ಮತ್ತು ಪರಂಪರೆಯ ಇಲಾಖೆಯ ದಾಖಲೆಗಳು.
4. https://damh-kdh.github.io/KDH-GIS
5. ಸಂಬಂಧಿಸಿದ ಸ್ಥಳೀಯ ದಾಖಲೆಗಳು
6. ನೇರ ಸಂದರ್ಶನದ ಮೂಲಕ ಸ್ಥಳೀಯ ಜನರ ಮೌಖಿಕ ಆಧಾರಗಳು
7. ಸಮಗ್ರ ಕರ್ನಾಟಕ ಇತಿಹಾಸ, ಕೆ. ಸದಾಶಿವ, 2022
8. ಕಿತ್ತೂರು ಸಂಸ್ಥಾನದ ಇತಿಹಾಸ. ಕರ್ನಾಟಕ ಸರ್ಕಾರ, ಪುರಾತತ್ವ ಮತ್ತು ಪರಂಪರೆಯ ಇಲಾಖೆ.
9. https://archaeology.karnataka.gov.in/en



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.